# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 870 |
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ |
| ಉತ್ತರಿಸುವ ದಿನಾಂಕ | 21-09-2022 |
| ಉತ್ತರಿಸುವವರು | ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ದೇವಸ್ಥಾನಗಳಿಗೆ ಭಕ್ತರಿಂದ ಕಾಣಿಕೆ, ಚಂದಾ, ದಾನದ ರೂಪದಲ್ಲಿ ಬರುವ ಹಣವನ್ನು ಆಯಾ ದೇವಸ್ಥಾನಗಳ ಯಾವ ಯಾವ ಬಾಬ್ತಿಗೆ ಖರ್ಚು ಮಾಡಲಾಗುತ್ತಿದೆ; (ಮಾಹಿತಿ ನೀಡುವುದು) | ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಸ್ಥಾನ/ಸಂಸ್ಥೆಗಳಿಗೆ ಭಕ್ತರಿಂದ ಕಾಣಿಕೆ, ಚಂದಾ, ದಾನದ ರೂಪದಲ್ಲಿ ಬರುವ ಹಣವನ್ನು ಆಯಾ ದೇವಸ್ಥಾನಗಳ ಅಗತ್ಯತೆ ಅನುಗುಣವಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997, ಸೆಕ್ಷನ್ 36ರನ್ವಯ ನಿಯಮಿಸಲಾದ ಪ್ರಾಧಿಕಾರದಿಂದ ಆಯವ್ಯಯ ಪಟ್ಟಿಗೆ ಅನುಮೋದನೆ ಪಡೆದು ದೇವಾಲಯದ ದೈನಂದಿನ ನಿರ್ವಹಣೆ, ಸಿಬ್ಬಂದಿ ವೇತನ, ವಾರ್ಷಿಕ ಜಾತ್ರೆ/ರಥೋತ್ಸವ ಮೂಲಭೂತ ಸೌಕರ್ಯಗಳ ಹಾಗೂ ಅಭಿವೃದ್ಧಿ ಬಾಬ್ತುಗಳಿಗೆ ಖರ್ಚು ಮಾಡಲಾಗುತ್ತಿದೆ. |
| ಆ) | ಭಕ್ತಿ ಪಂಥದ ಭಜನೆ, ಹರಿಕಥೆಗಳು ಹಾಗೂ ಇತರ ಧಾರ್ಮಿಕ ಕಥೆಗಳನ್ನು ಮುಂದಿನ ತಲಮಾರಿನ ಮಕ್ಕಳಿಗೆ ಕಲ್ಪಿಸಲು ಸೂಕ್ತ ಹಾಗೂ ಪರಿಣಿತಿ ಪಡೆದ ವ್ಯಕ್ತಿಗಳನ್ನು ಧಾರ್ಮಿಕ ಇಲಾಖೆಯ ಶ್ರದ್ಧಾ ಕೇಂದ್ರಗಳಲ್ಲಿ ನೇಮಿಸಲಾಗಿದೆಯೇ; (ಇದ್ದಲ್ಲಿ ವಿವರ ನೀಡುವುದು) | • ಧಾರ್ಮಿಕ ದತ್ತಿ ಇಲಾಖೆಗೆ ಒಳಪಡುವ ದೇವಾಲಯಗಳಲ್ಲಿ ಅನುಚಾನವಾಗಿ ನಡೆದುಕೊಂಡು ಬಂದಿರುವ ಧಾರ್ಮಿಕ ಪರಂಪರೆ ಪದ್ಧತಿಗಳು, ಸಂಪ್ರದಾಯಗಳ ಪೋಷಣೆಗಾಗಿ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಲ್ಲಿ ತಿಂಗಳಿಗೊಮ್ಮೆ ಒಂದು ಕಾರ್ಯಕ್ರಮದಂತೆ, ವರ್ಷಕ್ಕೆ 12 ದೇಗುಲ ವಿಶೇಷೋತ್ಸವ ಕಾರ್ಯಕ್ರಮಗಳನ್ನು ನಡೆಸಲು ಆಯುಕ್ತರು ಧಾರ್ಮಿಕ ದತ್ತಿ ಇಲಾಖೆಯವರ ಸುತ್ತೋಲೆ ಸಂಖ್ಯೆ:ಎಡಿಎಂ/ಇತರೆ/ಸಿಆರ್/356/2012-13, ದಿನಾಂಕ:07.01.2013ರ ರೀತ್ಯ ಕ್ರಮ ಕೈಗೊಳ್ಳಲಾಗಿದೆ. ದೇಗುಲ ವಿಶೇಷೋತ್ಸವ ಕಾರ್ಯಕ್ರಮಗಳಲ್ಲಿ ಪ್ರತಿ ತಿಂಗಳು ಹೊಸ ಹೊಸ ಕಲಾವಿದರಿಗೆ ಅವಕಾಶ ಕಲ್ಪಿಸಲು ಸೂಚನೆ ನೀಡಲಾಗಿದೆ.<br>• ವಿಶೇಷೋತ್ಸವ ಕಾರ್ಯಕ್ರಮಕ್ಕೆ ಹರಿಕಥೆಗಳು ಹಾಗೂ ಇತರೆ ಧಾರ್ಮಿಕ ಕಥೆಗಳನ್ನು ಮುಂದಿನ ತಲೆಮಾರಿನ ಮಕ್ಕಳಿಗೆ ಕಲ್ಪಿಸಲು ಹರಿಕಥೆ ದಾಸರು/ಕೀರ್ತನಕಾರರನ್ನು ಆಯಾಯ ದೇವಾಲಯದ ವತಿಯಿಂದಲೇ ಆಯೋಜಿಸಿಕೊಂಡು ಕಾರ್ಯಕ್ರಮವನ್ನು ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕಾರ್ಯಕ್ರಮಕ್ಕಾಗಿ ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ಖಾಯಂ ಆಗಿ ಕಲಾವಿದರನ್ನು ನೇಮಿಸಿಕೊಂಡಿರುವುದಿಲ್ಲ.<br>• ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002 ಹಾಗೂ ತಿದ್ದುಪಡಿ ನಿಯಮಗಳು 2012ರ ನಿಯಮ 8ರ ಅಡಿಯಲ್ಲಿ ಹರಿಕಥೆ, ಭಜನೆ ಕಲಾವಿದರನ್ನು ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಿರುವುದಿಲ್ಲ. |
| ಇ) | ದೇವಾಲಯಗಳಲ್ಲಿ ಭಕ್ತರ ಅನುಕೂಲ, ವಿಕಾಸಕ್ಕೆ ಮನರಂಜನೆಗಾಗಿ ಹರಿಕಥೆ, ಸಂಗೀತ ಭಜನೆಗಳ ಮೂಲಕ ಭಕ್ತಿ ಪೂರ್ವಕವಾಗಿ ಧಾರ್ಮಿಕ ಜ್ಞಾನವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಅಗತ್ಯತೆ ಹೆಚ್ಚಾಗಿದ್ದು, ಇದನ್ನು ಆರಂಭಿಸಲು ಕಲಾವಿದರನ್ನು ನೇಮಿಸಲು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | |
| ಈ) | ಇದರ ಪ್ರಯೋಗಾರ್ಥವಾಗಿ ರಾಜ್ಯದ 'ಎ' ವರ್ಗದ ಆದಾಯ ಹೆಚ್ಚಿರುವ ದೇವಸ್ಥಾನಗಳಲ್ಲಿ ಪ್ರಸ್ತುತ ವರ್ಷವೇ ಈ ಹರಿಕಥೆ, ಭಜನೆಯ ಕಲಾವಿದರನ್ನು ನೇಮಿಸಲು ಕ್ರಮ ವಹಿಸಲಾಗುವುದೇ; (ಮಾಹಿತಿ ನೀಡುವುದು) | |
| ಉ) | ಮುಂದಿನ ಜನಾಂಗಕ್ಕೆ ಭಕ್ತಿ ಪಂಥದ ವಿಚಾರಗಳ ಬಗ್ಗೆ ಅರಿವು ಮೂಡಿಸಲು ಧಾರ್ಮಿಕ ದತ್ತಿ ದೇವಾಲಯಗಳಲ್ಲಿ ಹಾಗೂ ಇತರೆ ಹಿಂದೂ ಧಾರ್ಮಿಕ ಕೇಂದ್ರಗಳಲ್ಲಿ ಭಜನೆಗಳು ಹಾಗೂ ಹರಿಕಥೆಗಳಲ್ಲಿ ಪರಿಣಿತಿಯನ್ನು ಪಡೆದಿರುವ ವ್ಯಕ್ತಿಗಳನ್ನು ನೇಮಿಸಿ ಸ್ಥಳೀಯ ಮಕ್ಕಳಿಗೆ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | |

ಸಂಖ್ಯೆ: ಕಂಇ 179 ಮುಸಪ್ರ 2022

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು